RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ-V<br>Part-V | ಬೆಂಗಳೂರು, ಬುಧವಾರ, ನವೆಂಬರ್ ೨೭, ೨೦೧೯ (ಮಾರ್ಗಶಿರ ೬, ಶಕ ವರ್ಷ ೧೯೪೦)<br>Bengaluru, Wednesday, November 27, 2019 (Margashira 6, Shaka Varsha 1940) | ನಂ. ೧೦೦೯<br>No. 1009 |
|---|---|---|

**ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿ**

ಕಾವೇರಿ ಭವನ, 6ನೇ ಮಹಡಿ, ಕೆ.ಹೆಚ್.ಬಿ. ಕಾಂಪ್ಲೆಕ್ಸ್, ಕೆ.ಜಿ.ರಸ್ತೆ, ಬೆಂಗಳೂರು-560 009.

**ಹೆಚ್ಚುವರಿ ಅಧಿಸೂಚನೆ**

**ಸಂಖ್ಯೆ: ಡಿಪಿಎನ್:ನೇ.ಸ: 09:2019-20, ಬೆಂಗಳೂರು., ದಿನಾಂಕ: 26-11-2019**

ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಲ್ಲಿ ಖಾಲಿ ಇರುವ ಗ್ರೂಪ್-ಬಿ ವೃಂದದ ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರ ಒಟ್ಟು 100 ಹುದ್ದೆಗಳನ್ನು ಭರ್ತಿ ಮಾಡಲು, ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳಿಂದ ದಿನಾಂಕ: 10-10-2019ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆಯ ಅನುಸಾರ ಆನ್ ಲೈನ್ (ON-LINE) ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ ಒಇ 218 ಪಿಪಿಇ 2019 (ಭಾಗ-2) ದಿನಾಂಕ:08.11.2019ರಲ್ಲಿ ಹೆಚ್ಚುವರಿಯಾಗಿ 81 ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರ ಹುದ್ದೆಗಳನ್ನು ಸಹ ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಿಕೊಳ್ಳಲು ಸರ್ಕಾರವು ಅನುಮತಿ ನೀಡಿರುತ್ತದೆ. ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ: ಒಇ 218 ಪಿಪಿಇ 2018 (ಭಾಗ-2) ದಿನಾಂಕ: 12.11.2019ರಲ್ಲಿ ಹಾಗೂ ಸರ್ಕಾರದ ಪತ್ರ ಸಂಖ್ಯೆ: ಒಇ 218 ಪಿಪಿಇ 2018(ಭಾಗ-2) ದಿನಾಂಕ:21.11.2019 ರಲ್ಲಿ 124 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಿದ್ದು, ಪ್ರಸ್ತುತ ಹೆಚ್ಚುವರಿಯಾಗಿ ಅನುಮತಿ ನೀಡಿರುವ 81 ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರ ಹುದ್ದೆಗಳನ್ನು ಸಹ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಮುಂದಿನ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿರುತ್ತದೆ.

ದಿನಾಂಕ: 25.11.2019 ರಂದು ನಡೆದ ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರ ನೇಮಕಾತಿ ಸಮಿತಿ ಸಭೆಯು ಈಗಾಗಲೇ ರೆಸಿಡಿಯಲ್ ಪೇರೆಂಟ್ ಕೇಡರ್ ಮುಖಾಂತರ 100 ಮತ್ತು ಹೈದ್ರಾಬಾದ್-ಕರ್ನಾಟಕ ಮೀಸಲಾತಿಯ 24 ಹುದ್ದೆಗಳಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಕ್ರಿಯೆಯು ಅರ್ಜಿ ಸಲ್ಲಿಸುವಿಕೆಯ ಹಂತದಲ್ಲಿರುವುದರಿಂದ ಹಾಗೂ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಸ್ವಯಂ ಪ್ರೇರಿತವಾಗಿ ದಾಖಲಿಸಿದ ರಿಟ್ ಅರ್ಜಿ ಸಂಖ್ಯೆ 48130:2019ರ ಪ್ರಕರಣದಲ್ಲಿ ಖಾಲಿ ಇರುವ ಅಭಿಯೋಜಕರ ಹುದ್ದೆಗಳನ್ನು ತ್ವರಿತವಾಗಿ ತುಂಬುವ ಬಗ್ಗೆ ಅವಶ್ಯ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಿರುವುದರಿಂದ, ಪ್ರಸ್ತುತ ಹೆಚ್ಚುವರಿಯಾಗಿ ಭರ್ತಿ ಮಾಡಲು ಅನುಮತಿ ನೀಡಿರುವ 81 ಹುದ್ದೆಗಳನ್ನು ಸಹ ಸೇರಿಸಿಕೊಂಡು ಒಟ್ಟಾಗಿ ನೇಮಕಾತಿ ಪ್ರಕ್ರಿಯೆಯನ್ನು ಮುಂದುವರಿಸಲು ಸಮಿತಿಯು ನಿರ್ಣಯಿಸಿರುತ್ತದೆ. ದಿನಾಂಕ: 10-10-2019ರ ಕರ್ನಾಟಕ ರಾಜ್ಯ ಪತ್ರದಲ್ಲಿ ಈಗಾಗಲೇ ಆಹ್ವಾನಿಸಿರುವ ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರ 100 ಹುದ್ದೆಗಳ ಜೊತೆಗೆ ಸರ್ಕಾರವು ಹೆಚ್ಚುವರಿಯಾಗಿ ಅನುಮತಿಸಿರುವ 81 ಹುದ್ದೆಗಳನ್ನು ಸಹ ಸೇರ್ಪಡೆಗೊಳಿಸಿ, ರೆಸಿಡಿಯಲ್ ಪೇರೆಂಟ್ ಕೇಡರ್ ಮುಖಾಂತರ ಭರ್ತಿ ಮಾಡಲು ನಿಯಾಮಾನುಸಾರ ವರ್ಗೀಕರಿಸಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರ ಹುದ್ದೆಗಳಿಗೆ ರೆಸಿಡಿಯಲ್ ಪೇರೆಂಟ್ ಕೇಡರ್ ಮುಖಾಂತರ ತುಂಬಬೇಕಾದ ಹುದ್ದೆಗಳ ಪರಿಷ್ಕೃತ ಮೀಸಲಾತಿ ವರ್ಗೀಕರಣ ಈ ಕೆಳಕಂಡಂತಿರುತ್ತದೆ.

| ವಿವರಗಳು | ಸಾಮಾನ್ಯ ಅಭ್ಯರ್ಥಿ | ಮಹಿಳಾ ಅಭ್ಯರ್ಥಿ | ಮಾಜಿ ಸೈನಿಕ | ಗ್ರಾಮೀಣ ಅಭ್ಯರ್ಥಿ | ಕನ್ನಡ ಮಾಧ್ಯಮ | ಅಂಗವಿಕಲ | ಒಟ್ಟು |
|---|---|---|---|---|---|---|---|
| ಸಾಮಾನ್ಯ ವರ್ಗ | 19 | 27 | 08 | 20 | 04 | 01 (ಸಾಮಾನ್ಯ) (ಚಲನ ವಲನ ವೈಕಲ್ಯ)<br>01 ( ಸಾಮಾನ್ಯ) (ದೃಷ್ಟಿ ಮಾಂದ್ಯ) | 80 |

Scanned by CamScanner

| ವಿವರಗಳು | ಸಾಮಾನ್ಯ ಅಭ್ಯರ್ಥಿ | ಮಹಿಳಾ ಅಭ್ಯರ್ಥಿ | ಮಾಜಿ ಸೈನಿಕ | ಗ್ರಾಮೀಣ ಅಭ್ಯರ್ಥಿ | ಕನ್ನಡ ಮಾಧ್ಯಮ | ಅಂಗವಿಕಲ | ಒಟ್ಟು |
|---|---|---|---|---|---|---|---|
| ಪರಿಶಿಷ್ಟ ಜಾತಿ | 05 | 09 | 02 | 06 | 01 | 01 (ಸಾಮಾನ್ಯ) (ಚಲನ ವಲನ ವೈಕಲ್ಯ) | 24 |
| ಪರಿಶಿಷ್ಟ ಪಂಗಡ | 02 | 01 | 01 | 01 | – | – | 05 |
| ಪ್ರವರ್ಗ I | 02 | 02 | – | 02 | – | – | 06 |
| ಪ್ರವರ್ಗ IIA | 05 | 08 | 02 | 06 | 02 | 01 (ಸಾಮಾನ್ಯ) (ಚಲನ ವಲನ ವೈಕಲ್ಯ) | 24 |
| ಪ್ರವರ್ಗ IIB | 02 | 02 | – | 02 | – | – | 06 |
| ಪ್ರವರ್ಗ IIIA | 02 | 02 | 01 | 02 | – | – | 07 |
| ಪ್ರವರ್ಗ IIIB | 02 | 03 | 01 | 02 | – | – | 08 |
| ಒಟ್ಟು | 39 | 54 | 15 | 41 | 07 | 04 | 160 |

ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ಸಂಬಂಧಿಸಿದ 21 ಅಧಿಕಾರಿಗಳು ಇಚ್ಛಾ ಪತ್ರ ಸಲ್ಲಿಸಿ 371 ಜೆ ಸೌಲಭ್ಯ ಪಡೆದುಕೊಂಡಿರುವುದರಿಂದ ಅವುಗಳಿಂದ ತೆರವಾದ 21 ಹುದ್ದೆಗಳನ್ನು ರೆಸಿಡಿಯಲ್ ಪೇರೆಂಟ್ ಕೇಡರ್ ಮುಖಾಂತರ ತುಂಬಿಕೊಳ್ಳುವ ಬಗ್ಗೆ ದಿನಾಂಕ: 10-10-2019ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿದ್ದು, ಸದರಿ 21 ಹುದ್ದೆಗಳಿಗೆ ಸಂಬಂಧಪಟ್ಟ ಮೀಸಲಾತಿ ವರ್ಗೀಕರಣದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಕಾರಣ ಸದರಿ 21 ಹುದ್ದೆಗಳಿಗೆ ಸಂಬಂಧಿಸಿದಂತೆ ದಿನಾಂಕ: 10-10-2019ರ ಕರ್ನಾಟಕ ರಾಜ್ಯ ಪತ್ರದ ಭಾಗ-05ರ ಪುಟ ಸಂಖ್ಯೆ 1930ನ್ನು ಅವಲೋಕಿಸುವುದು. ಉಳಿದ 160 ಹುದ್ದೆಗಳಿಗೆ ಮೇಲ್ಕಂಡಂತೆ ವರ್ಗೀಕರಣ ಮಾಡಲಾಗಿದೆ.

ಹೈದ್ರಾಬಾದ್-ಕರ್ನಾಟಕ (ಕಲ್ಯಾಣ ಕರ್ನಾಟಕ) ಮೀಸಲಾತಿ ಅಡಿಯಲ್ಲಿ ಲಭ್ಯವಿರುವ ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರ 24 ಹುದ್ದೆಗಳಿಗೆ ಈಗಾಗಲೇ ದಿನಾಂಕ: 10-10-2019ರ ಕರ್ನಾಟಕ ರಾಜ್ಯಪತ್ರದ ಭಾಗ-5ರಲ್ಲಿ ಪ್ರತ್ಯೇಕ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಸದರಿ ಹುದ್ದೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು, ವಿದ್ಯಾರ್ಹತೆ, ವಯೋಮಿತಿ, ಮೀಸಲಾತಿ ಪ್ರಮಾಣ ಪತ್ರಗಳು ಮತ್ತಿತರ ಎಲ್ಲಾ ವಿವರಗಳಿಗಾಗಿ ದಿನಾಂಕ:10-10-2019ರ ಕರ್ನಾಟಕ ರಾಜ್ಯ ಪತ್ರದ ಭಾಗ-5ರ ಪುಟ ಸಂಖ್ಯೆ 1929 ರಿಂದ 1960ರವರಗೆ ಪ್ರಕಟವಾಗಿರುವ ಅಧಿಸೂಚನೆಗಳನ್ನು ಅವಲೋಕಿಸಿ, ಅರ್ಜಿಗಳನ್ನು ಸಲ್ಲಿಸುವುದು. ಮೇಲ್ಕಂಡ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 08.11.2019 ರಿಂದ 30.11.2019 ರವರಗೆ ಈಗಾಗಲೇ ಮುಂದೂಲ್ಪಟ್ಟಿದ್ದು ಸದರಿ ಮಾಹಿತಿಯು 06.11.2019 ರ ಕರ್ನಾಟಕ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟವಾಗಿರುತ್ತದೆ.

**ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ಈಗ ಮತ್ತೊಮ್ಮೆ ವಿಸ್ತರಿಸಲಾಗಿದ್ದು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 10-12-2019 ಆಗಿರುತ್ತದೆ. ಅಂಚೆ ಮೂಲಕ ಶುಲ್ಕ ಪಾವತಿಸಲು ಕೊನೆಯ ದಿನಾಂಕ: 13-12-2019 ಆಗಿರುತ್ತದೆ. ಹೈದ್ರಾಬಾದ್-ಕರ್ನಾಟಕ (ಕಲ್ಯಾಣ ಕರ್ನಾಟಕ) ಮೀಸಲಾತಿ ಅಡಿ ಅರ್ಜಿ ಸಲ್ಲಿಸುವವರಿಗೂ ಸಹ ಮೇಲ್ಕಂಡ ವಿಸ್ತರಿತ ದಿನಾಂಕವು ಅನ್ವಯವಾಗುತ್ತದೆ. ಈಗಾಗಲೇ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅಗತ್ಯತೆ ಇರುವುದಿಲ್ಲ.**

**ಹೆಚ್.ಕೆ. ಜಗದೀಶ್**
ಸದಸ್ಯ ಕಾರ್ಯದರ್ಶಿ,
ಸ.ಸ.ಅ-ವ-ಸ.ಸ.ವ ನೇಮಕಾತಿ ಸಮಿತಿ
ಹಾಗೂ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ
ಇಲಾಖಾ ನಿರ್ದೇಶಕರು (ಪ್ರ), ಬೆಂಗಳೂರು.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 25

Scanned by CamScanner